ಪಿ ಡಬ್ಲ್ಯೂ: 1

ದಿನಾಂಕ 25-10-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ದಾವಾಸ್ತಿಯು ನನ್ನ ತಂದೆಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ದಾವಾಸ್ತಿ ಆರ್ ಸಿ ಸಿ ಕಟ್ಟಡ ಆಗಿರುತ್ತದೆ. ಮೊದಲು ಮೇಲ್ಮುದ್ದೆ ಮನೆ ಆಗಿರುತ್ತದೆ. ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. ಇ- ಸ್ವತ್ತನ್ನು ಮಾಡಿಸಿರುತ್ತೇನೆ. ಇ- ಸ್ವತ್ತಿಗೆ ನನ್ನ ತಂದೆ ಮಾಹಿತಿ ನೀಡಿರುತ್ತಾರೆ. ನನನ ಹೆಸರಿನಲ್ಲಿರುವ ಉತಾರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ . ಇ- ಸ್ವತ್ತನ್ನು ತಯಾರಿಸುವ ಕಾಲಕ್ಕೆ ಯಾರು ಹಾಜರಿದ್ದರು ಎಂದರೆ ನನ್ನ ತಂದೆ ಹಾಜರಿದ್ದ ಕಾರಣ ಅವರಿಗೂ ಮಾಹಿತಿ ಇರುತ್ತದೆ. ದಿಃ 17-12-2020 ರಂದು ನನ್ನ ತಂದೆ ಮರಣ ಹೊಂದಿರುತ್ತಾರೆ. ದಿಃ 23-10-2020 ರಲ್ಲಿ ಸರ್ವೆ ಇಲಾಖೆ ಅವರಿಗೆ ಮತ್ತು ಗ್ರಾಮ ಪಂಚಾಯತಿಯವರಿಗೆ ವಕೀಲರ ಮುಖಾಂತರ ನೋಟಿಸ್ ನೀಡಿರುತ್ತೇವೆ ಎಂದರೆ ಸರಿ. ದಿಃ 04-12-2020 ರಂದು ಸದರಿಯವರು ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ ಸದರಿ ಬಗ್ಗೆ ಮಾಹಿತಿ ಇರುವುದಿಲ್ಲ . ಪ್ರಸ್ತುತ ವಕೀಲರೇ ನೋಟಿಸ್ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಅವರು ನೀಡಿದ ಉತ್ತರದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನೋಟಿಸ್ ಮತ್ತು ಪ್ರತ್ಯುತ್ತರದ ಮಾಹಿತಿಯನ್ನು ದಾವೆದ ಆಸ್ತಿಯ ವಿಚಾರವಾಗಿ ನೀಡಿರುತ್ತಾರೆ ಎಂದರೆ ಸರಿ . ನಮ್ಮ ಆಸ್ತಿಯ ಅಳತೆಯನ್ನು ಸರ್ವೆ ಅವರು ತಪ್ಪಾಗಿ ಸರ್ವೆ ಮಾಡಿದ್ದು, ನಮ್ಮ ಆಸ್ತಿಯ ಹದ್ದು ಬಸ್ತನ್ನು ಮಾಡುವವರೆಗೂ ಪಕ್ಕದ ಜಾಗದ ಆಸ್ತಿಯನ್ನು ತಡೆಹಿಡಿಯುಂತೆ ನೋಟಿಸ್ ನೀಡಿರುತ್ತೇವೆ. ದಾವಾಸ್ತಿಯ ಕ್ಷೇತ್ರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾಸ್ತಿಯ ಕ್ಷೇತ್ರ ಎಷ್ಟು ಆಗಬೇಕು ಎಂದು ನೋಟಿಸ್ ನೀಡಿದ್ದೀರಿ ಎಂದರೆ ಗೊತ್ತಿಲ್ಲ. ಪೂರ್ವ ದಿಕ್ಕಿನ ವರೆಗೆ ನಮ್ಮ ಆಸ್ತಿ ಬರುತ್ತದೆ ಎಂದು ಮಾಹಿತಿ ನೀಡಿದೇವು. ನೋಟಿಸ್ ನಲ್ಲಿ ದಾವಾಸ್ತಿಯ ಕ್ಷೇತ್ರದ ಬಗ್ಗೆ ಮಾಹಿತಿ ನೀಡಿರುವುದಿಲ್ಲ ಎಂದರೆ ಗೊತ್ತಿಲ್ಲ. ದಾವಾಸ್ತಿಯ ಕ್ಷೇತ್ರದ ಬಗ್ಗೆ ದಾಖಲೆ ಇದೆಯೇ ಎಂದರೆ ಬಾಂಡ್ ಇದೆ ಎಂದು ನುಡಿಯುತ್ತಾರೆ. ಸದರಿ ಬಾಂಡ್ ನೋಂದಣಿಆಗಿರುತ್ತದೆ. ಸದರಿ ದಾಖಲೆಯಲ್ಲಿ ಗ್ರಾಮಠಾಣಾ ಆಸ್ತಿ ಆಗಿರುವುದರಿಂದ ಕ್ಷೇತ್ರದ ಬಗ್ಗೆ ಮಾಹಿತಿ ಇರುವುದಿಲ್ಲ. ಇ-ಸ್ವತ್ತಿನಲ್ಲಿ ದಾವಾಸ್ತಿಯ ಕ್ಷೇತ್ರವನ್ನು ನಮೂದಿಸಿರುತ್ತೇವೆ ಎಂದರೆ ಸರಿ. ದಾವೆಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾಸ್ತಿಯ ಕ್ಷೇತ್ರ ನಮೂದಿಸಿರುವುದರ ಬಗ್ಗೆ ನನಗೆ ನೆನಪಿರುವುದಿಲ್ಲ. ದಾವೆಯಲ್ಲಿ ದಾವಾಸ್ತಿಯ ಕ್ಷೇತ್ರ ನಮೂದಿಸಿರುವುದಿಲ್ಲ ಎಂದರೆ ಸರಿ .ನಮ್ಮ ಮನೆ 107.10 ಚದರ ಮೀ. ಇರುತ್ತದೆ ಎಂದರೆ ಸರಿ. ನಿವೇಶನ 250.85 ಚ. ಮೀ. ಇರುತ್ತದೆ ಎಂದರೆ ಸರಿ. ನಮ್ಮ ಮನೆಯಲ್ಲಿ ಎರಡು ಬಾಗಿಲು ಇರುತ್ತದೆ. ಪಶ್ಚಿಮಕ್ಕೆ ರಸ್ತೆ ಇರುತ್ತದೆ ಎಂದರೆ ಪೂರ್ವಕ್ಕೆ ರಸ್ತೆ ಇರುತ್ತದೆ ಎಂದು

ನುಡಿಯುತ್ತಾರೆ. ರುದ್ರಯ್ಯ ಅವರ ಮನೆಯ ಬಾಗಿಲು ದಕ್ಷಿಣಕ್ಕೆ ಇರುತ್ತದೆ. ರುದ್ರಯ್ಯ ಮತ್ತು ನಮ್ಮ ಮನೆಯ ನಡುವೆ ಪಂಚಾಯತಿ ರಸ್ತೆ ಇರುತ್ತದೆ. ದಾವಾಸ್ತಿಯ ದಕ್ಷಿಣಕ್ಕೆ ರೇವಣಸಿದ್ದಯ್ಯ ಅವರ ಆಸ್ತಿ ಇರುತ್ತದೆ. ಉತ್ತರಕ್ಕೆ ಚೆನ್ನಪ್ಪ ನೀಲಪ್ಪ ಅವರ ಆಸ್ತಿ ಇರುತ್ತದೆ ಎಂದರೆ ಹಾಗೆಂದು ಸದರಿಯವರು ಹೇಳಿಕೊಂಡು ಬಂದಿರುತ್ತಾರೆ. ಪ್ರಸ್ತುತವಾಗಿ ಚೆನ್ನಪ್ಪ ನೀಲಪ್ಪ ಪೂಜಾರ ಅವರ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿ. ದಾವಾಸ್ತಿಯ ಅಳತೆ ಮತ್ತು ಕ್ಷೇತ್ರ ತಪ್ಪಾಗಿರುವುದರ ಬಗ್ಗೆ ನೋಟಿಸ್ ನೀಡಿದ್ದು ಸದರಿ ಬಗ್ಗೆ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ . ತಪ್ಪಾದ ಕ್ಷೇತ್ರದ ಬಗ್ಗೆ ದಾವಾದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.**

ತೆ.ನ್ಯಾ.ದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ/-

ಓ ಹೇ ಕೆ ಸರಿ ಇದೆ. C/c. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.